ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಕುಮಟಾ.

ಸಿಸಿ ನಂ. 98/2023

ಫಿರ್ಯಾದಿ — ಆರೋಪಿ

ಮಾತೋಶ್ರೀ ಸೌಹಾರ್ದ ಕ್ರೆಡಿಟ್ ಸಹಕಾರಿ ನಿಯಮಿತ, ಶಾಖೆ ಕುಮಟಾ. ವಿರುದ್ಧ ಮನೀಷ ಅಶೋಕ ಹರಿಕಾಂತ

ಆರೋಪಿಃ

ಮನೀಷ ಅಶೋಕ ಹರಿಕಾಂತ ,
38 ವರ್ಷ, ಉ: ರೈತ ವ ಬಿಸಿನೆಸ್, ಸಾಃ ಕುರಿಗದ್ದೆ,
ತಾಃ ಬರ್ಗಿ, ಕುಮಟಾ.

– ದಂಡ ಪ್ರಕ್ರಿಯಾ ಸಂಹಿತೆ ಕಲಂ.251 ರಡಿ ಆಪಾದನೆ –

ನೀವು ದಿಃ 31-03-2020 ರಂದು ಫಿರ್ಯಾದುದಾರ ಸಂಸ್ಥೆಯಿಂದ ವೈಯಕ್ತಿಕ ಅಡಚಣೆಯ ಕುರಿತು ರೂ . 35,000/-ಗಳನ್ನು ಸಾಲ ಪಡೆದಿದ್ದು , ಸದರಿ ಸಾಲವು ಕಟಬಾಕಿಯಾಗಿದ್ದರಿಂದ ಅದರ ತಿರುವಳಿಯ ಸಲುವಾಗಿ ನೀವು ದಿಃ 19-04-2021 ರಂದು ಫಿರ್ಯಾದುದಾರ ಸಂಸ್ಥೆಗೆ ಎಸ್ ಬಿ ಐ ಶಾಖೆ ಕುಮಟಾ ಶಾಖೆಯ ಚೆಕ್ ನಂ. 132111 ನೇದನ್ನು ರೂ. 46,996/- ಕ್ಕೆ ಚೆಕ್ ನ್ನು ನೀಡಿದ್ದು, ಸದರಿ ಚೆಕ್ ನ್ನು ನಗದೀಕರಿಸಲು ಅವರ ಬ್ಯಾಂಕರರಾದ ಆಯ್ ಸಿ ಆಯ್ ಸಿ ಐ ಬ್ಯಾಂಕ್ ಕುಮಟಾ ಬ್ಯಾಂಕ್‌ಗೆ ಹಾಜರು ಪಡಿಸಿದಾಗ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂಬ ಹಿಂಬರಹದೊಂದಿಗೆ ಚೆಕ್ ಅಮಾನ್ಯಗೊಂಡು ವಾಪಸ್ಸು ಬಂದಿದ್ದು , ಈ ಕುರಿತು ನಿಮಗೆ ದಿಃ 21-06-2021 ರಂದು ವಕೀಲರ ಮುಖಾಂತರ ನೋಂದಾಯಿತ ಅಂಚೆ ನೋಟಿಸು ನೀಡಿದ್ದು, ಸದ್ರಿ ನೋಟಿಸು ನಿಮಗೆ ದಿಃ 22-06-2021 ರಂದು ಜಾರಿಯಾಗಿದ್ದಾಗ್ಯೂ ಸ್ವೀಕರಿಸದೇ ನೀವು ಸದ್ರಿ ಚೆಕ್‌ನಲ್ಲಿ ಹೇಳಿರುವ ಹಣವನ್ನು ವಾಪಸ್ಸು ಕೊಡದೇ ಕಲಂ 138 ಎನ್ ಐ ಆ್ಯಕ್ಟ ನೇದರ ಪ್ರಕಾರ ಅಪರಾಧ ಮಾಡಿರುತ್ತೀರೆಂದು ನಿಮ್ಮ ಮೇಲೆ ಆಪಾದನೆ ಇದೆ, ಅದಕ್ಕೆ ಏನು ಹೇಳುತ್ತೀರಿ?

**ಪ್ರಶ್ನೆ – 1** ನಿಮ್ಮ ಮೇಲೆ ಹೊರಿಸಲಾದ ಆಪಾದನೆಯನ್ನು ಕೇಳಿದಿರಾ? ಅದು ನಿಮಗೆ ತಿಳಿಯಿತೇ?

ಉತ್ತರ –

**ಪ್ರಶ್ನೆ – 2** ನಿಮ್ಮ ಮೇಲೆ ಹೊರಿಸಲಾದ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ ? ಅಥವಾ ಪ್ರತಿ ರಕ್ಷೆ ಇದೆಯೆ?

ಉತ್ತರ –

ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು. ಇದರಲ್ಲಿನ ಎಲ್ಲ ಅಂಶಗಳನ್ನು ಈ ಕಡತವು ಪೂರ್ಣವಾಗಿ ಒಳಗೊಂಡಿರುತ್ತದೆ.

ಸ್ಥಳಃ ಕುಮಟಾ<br>
ದಿಃ 02-07-2024.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು<br>
ಪ್ರಧಾನ ಪ್ರ.ದ.ನ್ಯಾ.ದಂ., ಕುಮಟಾ